**ಓಎಸ್ ನಂಃ 236/2017** **ಪಿಡಬ್ಲ್ಯೂ-1**

**ದಿನಾಂಕಃ 21.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಪಿ ಎಸ್ ಜಿ ವಕೀಲರಿಂದಃ**

ಸರ್ವೇ ನಂಬರ್ 298 ರ ಆಸ್ತಿಯ ಮೇಲೆ ದಾವೆ ಹೂಡಿರುತ್ತೇನೆ. ಅದರ ವಿಸ್ತೀರ್ಣ 2 ಎಕರೆ ಇರುತ್ತದೆ. ದಾವ ಷೆಡ್ಯೂಲ್ ಆಸ್ತಿಯು ನಮ್ಮ ತಂದೆಗೆ ಸೇರಿದ ಆಸ್ತಿಯಾಗಿರುತ್ತದೆ. ನಮ್ಮ ತಂದೆಗೆ ನಮ್ಮ ತಾತನಿಂದ ಬಂದಿರುತ್ತದೆ. ನಾನು ಬೆಳ್ಳಶೆಟ್ಟಿ ರವರ ಮಗಳು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವ ಷೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಚಿಕ್ಕಶೆಟ್ಟಿ ರವರ ಆಸ್ತಿ, ಪಶ್ಚಿಮಕ್ಕೆ ಓಣಿ, ಉತ್ತರಕ್ಕೆ ಕಾಳಶೆಟ್ಟಿರವರ ಆಸ್ತಿ, ದಕ್ಷಿಣಕ್ಕೆಃ ಕುಂದಮ್ಮರವರ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯು ಮಲ್ಲಯ್ಯನಪುರದ ಮಾದೇಗೌಡರವರಿಗೆ ಸೇರಿದ ಆಸ್ತಿ ಎಂದರೆ ಸರಿ. ದಿಃ 04.04.1978 ರ ಕ್ರಯ ಪತ್ರದ ಮೂಲಕ ಸಿದ್ದಮ್ಮರವರಿಗೆ ಕ್ರಯ ಆಗಿರುತ್ತದೆ ಎಂದರೆ ಸರಿ. ದಾವ ಷೆಡ್ಯೂಲ್ ಆಸ್ತಿಯು ಕ್ರಯದಂತೆ 2 ನೇ ಪ್ರತಿವಾದಿ ಸಿದ್ದಮ್ಮರವರ ಹೆಸರಿನಗೆ ಖಾತೆ ಆಗಿರುತ್ತದೆ ಎಂದರೆ ಸರಿ. ದಾವ ಷೆಡ್ಯೂಲ್ ಆಸ್ತಿಯು ಸಿದ್ದಮ್ಮರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಯಲ್ಲಿ ಸಿದ್ದಮ್ಮರವರೇ ಸ್ವಾಧೀನದಲ್ಲಿದ್ದಾರೆ ಮತ್ತು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ದಾವ ಷೆಡ್ಯೂಲ್ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಪಡೆಯುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವ ಷೆಡ್ಯೂಲ್ ಆಸ್ತಿಯು ಒಟ್ಟು ಕುಟುಂಬ ಆಸ್ತಿಯಲ್ಲ, ನಾನು ಒಟ್ಟು ಕುಟುಂಬಕ್ಕೆ ಸೇರಿದವಳಲ್ಲ, ನನಗೆ ದಾವ ಷೆಡ್ಯೂಲ್ ಆಸ್ತಿಯಲ್ಲಿ ಯಾವುದೇ ವಿಭಾಗ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಯು ಮೂಲತಃ ಸಿದ್ದಮ್ಮರವರಿಗೆ ಸೇರಿದ್ದು ಸದರಿ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಮಾಡಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ